5) ರಾಜ್ಯಾದ್ಯಂತ 90 ಜಾನುವಾರು ರೋಗ ಪತ್ತೆ ಹಚ್ಚುವ ಪ್ರಯೋಗಾಲಯಗಳನ್ನು ಮಂಜೂರು ಮಾಡಿದ್ದು ಇದರಿಂದ ರೋಗ ಪತ್ತೆ ಹಚ್ಚಿ ಸೂಕ್ತ ಚಿಕಿತ್ಸೆ ನೀಡಲು ಸಹಕಾರಿಯಾಗುವಂತೆ ಮಾಡಲಾಗಿದೆ.

6) ನಾಯಿ ಹುಚ್ಚುರೋಗದ ಲಸಿಕೆ ಹೊರತುಪಡಿಸಿ, ಮಿಕ್ಕ ಎಲ್ಲಾ ಜಾನುವಾರು ರೋಗಗಳ ರೋಗ ನಿರೋಧಕ ಚುಚ್ಚುಮದ್ದುಗಳನ್ನು ಉಚಿತವಾಗಿ ಸರಬರಾಜು ಮಾಡಲಾಗುತ್ತಿದೆ.

7) ಪಶುಪಾಲನಾ ಚಟುವಟಿಕೆಗಳಲ್ಲಿ ರಾಜ್ಯದ ಜಾನುವಾರು ಕ್ಷೇತ್ರದಲ್ಲಿ ರೈತರಿಗೆ ತರಬೇತಿಯನ್ನು ನೀಡಲಾಗುತ್ತಿದೆ.

8) ಮೇವಿನ ವಿವಿಧ ಕಿರು ಪೊಟ್ಟಣಗಳನ್ನು ರೈತರಿಗೆ ಉಚಿತವಾಗಿ ಸರಬರಾಜು ಮಾಡಲಾಗುತ್ತಿದೆ.

9) ಬಡತನದ ರೇಖೆ ಕೆಳಗಿರುವ ಕುರಿಗಾರರಿಗೆ ಮತ್ತು ಇವರ ಕುರಿಗಳಿಗೆ ವಿಮೆ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ.

10) ಸಾಮಾಜಿಕ ಆರ್ಥಿಕ ಕಾರ್ಯಕ್ರಮಗಳಲ್ಲಿ ಹಸು, ಎಮ್ಮೆ, ಕುರಿ ಮತ್ತು ಹಂದಿ ಘಟಕಗಳನ್ನು ಫಲಾನುಭವಿಗಳಿಗೆ ವಿತರಿಸಲಾಗುತ್ತಿದೆ.

11) ಸ್ವಸಹಾಯ ಮತ್ತು ಸ್ತ್ರೀಶಕ್ತಿ ಗುಂಪುಗಳಿಗೆ ಗಿರಿರಾಜ ಕೋಳಿ ಮರಿಗಳನ್ನು ಸರಬರಾಜು ಮಾಡಲಾಗುತ್ತಿದೆ.

ಈ ಎಲ್ಲಾ ಕಾರ್ಯಕ್ರಮಗಳ ಮೂಲಕ ಪಶುಸಂಗೋಪನೆಯನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ.

4688 (5480) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಂಜುಂಡಪ್ಪ ವರದಿಯ ಆಧಾರದ ಮೇಲೆ ಹಿಂದುಳಿದ ಗಡಿ ಪ್ರದೇಶ ಚಾಮರಾಜನಗರ ಜಿಲ್ಲೆ ಚಾಮರಾಜ ನಗರದಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸುವುದಕ್ಕೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಆ) ಹಿಂದುಳಿದ ಗಡಿ ಪ್ರದೇಶದ ಆಧಾರದ ಮೇಲೆ ರಾಜ್ಯದಲ್ಲಿರುವ ಹಿಂದುಳಿದ ಗಡಿ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವ ಬಗ್ಗೆ ಸರ್ಕಾರದ ಚಿಂತನೆ ಏನು;

ಇ) ಮೈಸೂರು ಲ್ಯಾಂಪ್ ಕಾರ್ಖಾನೆ ಒಂದು ಕಾಲದಲ್ಲಿ ಲಾಭದಾಯಕವಾಗಿದ್ದು, ಈಗ ನಷ್ಟ ಅನುಭವಿಸಲು ಕಾರಣಗಳೇನು;

ಈ) ಮೈಸೂರು ಲ್ಯಾಂಪ್ ಕಾರ್ಖಾನೆಯನ್ನು ಪುನರುಜ್ಜೀವನಗೊಳಿಸಲು ಸರ್ಕಾರ ಯೋಚಿಸಿದೆಯೇ;

ಉ) ಸರ್ಕಾರವು ಮೈಸೂರು ಲ್ಯಾಂಪ್ ಕಾರ್ಖಾನೆಯನ್ನು ಖಾಸಗಿಯವರಿಗೆ ಮಾರಿದೆಯೇ;

ಊ) ಹಾಗಾದರೆ ಎಷ್ಟು ಮೊತ್ತಕ್ಕೆ ಮಾರಾಟ ಮಾಡಲಾಗಿದೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಡಾ॥ ಡಿ.ಎಂ. ನಂಜುಂಡಪ್ಪ ವರದಿಯಲ್ಲಿ ಚಾಮರಾಜನಗರ ತಾಲ್ಲೂಕನ್ನು ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಒಂದೆಂದು ಗುರುತಿಸಲಾಗಿದೆ. ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗಾಗಿ ಕೈಗಾರಿಕಾ ವಿಕಾಸ ಎಂಬ ಹೊಸ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯ ರೂಪರೇಷೆಗಳು ಇಷ್ಟರಲ್ಲೇ ಅಂತಿಮಗೊಳ್ಳಲಿದೆ. ಆಯಾ ತಾಲ್ಲೂಕಿನ ನೈಸರ್ಗಿಕ ಸಂಪನ್ಮೂಲಗಳ ಆಧಾರದ ಮೇಲೆ ಪ್ರತಿಯೊಂದು ತಾಲ್ಲೂಕಿನಲ್ಲಿ ಒಂದು Anchor ಕೈಗಾರಿಕೆಯನ್ನು ಸ್ಥಾಪಿಸಲು ಪ್ರಸ್ತಾಪಿಸಲಾಗಿದೆ. ಇದಕ್ಕೆ ಪೂರಕವಾಗಿ ಚಾಮರಾಜನಗರ ತಾಲ್ಲೂಕು ಒಳಗೊಂಡಂತೆ ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಸಣ್ಣ ಕೈಗಾರಿಕೆಗಳ ಹಾಗೂ ಕುಶಲಕರ್ಮಿಗಳ ಅಭಿವೃದ್ಧಿಗಾಗಿ ಅವಶ್ಯಕವಾದ ಕೈಗಾರಿಕಾ ಮೂಲಭೂತ ಸೌಕರ್ಯಗಳು, ವಿಶೇಷ ಉತ್ತೇಜಕಗಳು ಹಾಗೂ ರಿಯಾಯಿತಿಗಳನ್ನು ಒದಗಿಸಲಾಗುವುದು. ಲಭ್ಯವಿರುವ ಪ್ರಾಂತೀಯ ಸಂಪನ್ಮೂಲಗಳ ಆಧಾರದ ಮೇಲೆ ಗುಂಪು ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸಲಾಗುವುದು.

ಆ) 2001–06ರ ಕೈಗಾರಿಕಾ ನೀತಿಯಲ್ಲಿ, ರಾಜ್ಯದ ತಾಲ್ಲೂಕುಗಳನ್ನು 4 ವಲಯಗಳನ್ನಾಗಿ ವಿಂಗಡಣೆ ಮಾಡಿ, ಕೈಗಾರಿಕಾ ಅಭಿವೃದ್ಧಿಗಾಗಿ ಉತ್ತೇಜಕಗಳು ಮತ್ತು ರಿಯಾಯಿತಿಗಳನ್ನು ನೀಡಲಾಗಿದೆ. 52 ತಾಲ್ಲೂಕುಗಳನ್ನು ಗಡಿ ತಾಲ್ಲೂಕುಗಳೆಂದು ಗುರುತಿಸಲಾಗಿದೆ. ಅದರಲ್ಲಿ 20 ತಾಲ್ಲೂಕುಗಳು ಸಿ ವಲಯ, 16 ತಾಲ್ಲೂಕುಗಳು ಡಿ ವಲಯ, 13 ತಾಲ್ಲೂಕುಗಳು ಬಿ ವಲಯ ಮತ್ತು 2 ತಾಲ್ಲೂಕುಗಳು ಎ ವಲಯದಡಿ ಬರುತ್ತವೆ ಎಂದು ಗುರುತಿಸಲಾಗಿದೆ. ಇದರ ಹೊರತು ಬೇರೆ ಯಾವುದೇ ವಿಶೇಷ ಉತ್ತೇಜಕಗಳನ್ನು ಮತ್ತು ರಿಯಾಯಿತಿಗಳನ್ನು ಈ ಹಿಂದುಳಿದ ಗಡಿ ತಾಲ್ಲೂಕುಗಳಿಗೆ ಲಭ್ಯವಿರುವುದಿಲ್ಲ.

ಇ) ಆಡಳಿತಾತ್ಮಕ ಮತ್ತು ಇತರ ಮೇಲ್ವಚ್ಚಗಳಲ್ಲಿ ಉಂಟಾದ ಹೆಚ್ಚಳ, ದುಡಿಯುವ ಬಂಡವಾಳದ ಕೊರತೆಯಿಂದ ಉತ್ಪಾದನೆ ಮತ್ತು ಮಾರಾಟದಲ್ಲಿ ಉಂಟಾದ ಕುಸಿತ, ಹೆಚ್ಚಿನ ನೌಕರ ವರ್ಗದಿಂದಾದ ಸಿಬ್ಬಂದಿ ವೆಚ್ಚ, ಸಂಸ್ಥೆಯು ಪಡೆದಿದ್ದ ವಿವಿಧ ಸಾಲಗಳ ಮೇಲೆ ಹೆಚ್ಚಿನ ಬಡ್ಡಿ ಬಾಬ್ತು ಮುಂತಾದವುಗಳು ನಷ್ಟಕ್ಕೆ ಕಾರಣಗಳಾಗಿವೆ.

ಈ) ಇಲ್ಲ

ಉ) ಯಾರಿಗೂ ಮಾರಿಲ್ಲ. ಕಾರ್ಖಾನೆಯನ್ನು ಸಮಾಪನೆಗೊಳಿಸುವ ಮತ್ತು ಸಮಾಪನಾಧಿಕಾರಿಗಳನ್ನು ನೇಮಿಸುವ ಪ್ರಕ್ರಿಯೆಯು ಕರ್ನಾಟಕ ಸರ್ಕಾರದ ಉಚ್ಚ ನ್ಯಾಯಾಲಯದ ಮುಂದೆ ಇದೆ.

ಊ) ಅನ್ವಯಿಸುವುದಿಲ್ಲ.

4690 (5482) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಮಾನ್ಯ ಬೃಹತ್, ಮಧ್ಯಮ ಮತ್ತು ಸಣ್ಣ ಕೈಗಾರಿಕಾ ಹಾಗೂ ಮೂಲಭೂತ ಸೌಲಭ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸರ್ಕಾರಿ ಒಡೆತನದ ಎಷ್ಟು ಕಾರ್ಖಾನೆಗಳನ್ನು ಮುಚ್ಚಲಾಗಿದೆ;

ಆ) ಈ ಕೈಗಾರಿಕೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾರ್ಮಿಕರುಗಳ ಸಂಖ್ಯೆ ಎಷ್ಟು;

ಇ) ಕಾರ್ಖಾನೆ ಮುಚ್ಚಿದ ನಂತರ ಬೀದಿಪಾಲಾದ ಕಾರ್ಮಿಕರ ಜೀವನದ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈ) ನೂತನ ವಿದ್ಯುತ್ ಕಾರ್ಖಾನೆಗೆ ಸೇರಿದ ಆಸ್ತಿಗಳ ವಿವರಗಳೇನು;

ಉ) ನೂತನ ವಿದ್ಯುತ್ ಕಾರ್ಖಾನೆಗಳಲ್ಲಿ ಯಾವ ಯಾವ ರೀತಿಯ ಯಂತ್ರೋಪಕರಣಗಳೂ ಇವೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ರಾಜ್ಯದಲ್ಲಿ ಸರ್ಕಾರಿ ಒಡೆತನದ 13 ಕಾರ್ಖಾನೆಗಳನ್ನು ಮುಚ್ಚಲಾಗಿದೆ.

ಆ) ಮುಚ್ಚಿರುವ ಕಾರ್ಖಾನೆಗಳಲ್ಲಿ ಈಗ ಯಾವುದೇ ಕಾರ್ಮಿಕರು/ನೌಕರರು ಕೆಲಸ ನಿರ್ವಹಿಸುತ್ತಿಲ್ಲ.

ಇ) ಮುಚ್ಚಿದ ಕಾರ್ಖಾನೆಯ ಕಾರ್ಮಿಕರು/ನೌಕರರಿಗೆ ಸ್ವಯಂ ನಿವೃತ್ತಿ ಸೌಲಭ್ಯಗಳನ್ನು ನೀಡಲಾಗಿದೆ ಹಾಗೂ ಸಾಮಾಜಿಕ ಸುರಕ್ಷತಾ ಜಾಲದ ಕಾರ್ಯಕ್ರಮದಡಿಯಲ್ಲಿ ಸ್ವಯಂ ನಿವೃತ್ತಿ ತೆಗೆದುಕೊಂಡ ನೌಕರರಿಗೆ, ಸ್ವಯಂ ಉದ್ಯೋಗ ಕಲ್ಪಿಸುವ ದಿಶೆಯಲ್ಲಿ ವಿನ್ಯಾಸ ತರಬೇತಿ ನೀಡಿ, ಅಂತಹ ನೌಕರರಿಗೆ ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮ ನಡೆಸಲು ಕ್ರಮ ತೆಗೆದುಕೊಳ್ಳಲಾಗಿದೆ.